


### ಮುದ್ದಾದ ಮುಖಪುಟ

ಮುದ್ದಾದ ಮುಖ ಪುಟ ದೊಂದಿಗೆ ಬಂದ ಜುಲೈ 22ರ 'ಸುಧಾ'ಳನ್ನು ಕಂಡು ಎಷ್ಟು ಆನಂದವಾಯಿ ತೆಂದರೆ ಹೇಳಲು ಪದಗಳೇ ಇಲ್ಲ. ಮಗುವಿನ ಮುದ್ದು ಮುಖ ಕಣ್ಣಿಗೆ ಕಟ್ಟಿದಂತಿದೆ. ಇದನ್ನು ಜೋಪಾನವಾಗಿಡುವೆ.

–ಡಿ.ಎಸ್. ಪಂಕಜ ಸುಬ್ರಮಣ್ಯಂ, ಬೆಂಗಳೂರು

### ಹೃದಯ ರೋಗಕ್ಕೆ ಮದ್ದು

ಕಂದಮ್ಮಗಳ ಹೃದಯ ರೋಗದ ಕುರಿತ ಸುಧಾ ಹೆಗಡೆ ಮುಖಪುಟ ಲೇಖನ ಹಸುಗೂಸುಗಳಿಗೆ ಕಾಡುವ ಹೃದಯ ರೋಗಕ್ಕೆ ಕಾರಣ ಹಾಗೂ ನವೀನ ತಂತ್ರಜ್ಞಾನದ ಮೂಲಕ ವಾಸಿ ಮಾಡಬಹುದಾದ ವಿಧಾನವನ್ನು ಸ್ಪಷ್ಟವಾಗಿ ವಿವರಿಸಿದೆ.

–ನಾಗರಾಜ ಬಣಕಾರ್, ಕೊಟ್ಟೂರು/
ಪಿ.ಗೋವಿಂದರಾಜ್, ಶಿವಮೊಗ್ಗ/
ರಾಜೇಂದ್ರಕುಮಾರ್, ದೊಡ್ಡಬಳ್ಳಾಪುರ

### ವೈಷ್ಣವ ಕ್ಷೇತ್ರದ ಸುತ್ತಾಟ

ಗುಜರಾತಿನ ವೈಷ್ಣವಿ ಕ್ಷೇತ್ರಗಳ ಸಮೂಹದಲ್ಲಿ ನಮ್ಮನ್ನು ಸುತ್ತಾಡಿಸಿದ ಲೇಖಕ ಶ್ರೀಧರ ರಾಯಸಂ ಅವರಿಗೆ ಧನ್ಯವಾದಗಳು, ಪ್ರವಾಸ ಸೊಗಸಾಗಿದೆ. ಶಿಲ್ಪ ವೈಭವದ ಮುಂದೆ ಲೇಖಕರು ಎಂಬ ಚಿತ್ರದಲ್ಲಿ ಅವರೇ ನಾಪತ್ತೆಯಾಗಿದ್ದಾರೆ!

–ಸ್ವರಾಜ್ಯಲಕ್ಷ್ಮೀ, ವಿ. ಪ್ರಾಣೇಶರಾವ್,
ಹೊಸಪೇಟೆ

### ಬ್ಲ್ಯಾಕ್ ಫಾರೆಸ್ಟ್ ಪರ್ವತ!

ಬ್ಲ್ಯಾಕ್ ಫಾರೆಸ್ಟ್ ಹೆಸರಿನ ಮೂಲ ಜರ್ಮನಿಯಲ್ಲಿರುವ ಒಂದು ಪರ್ವತ ಹಾಗೂ ಅರಣ್ಯ ಪ್ರದೇಶ ಎಂದು ಲೇಖಕಿ ರಶ್ಮಿ ಮಾಚಕನೂರ ಅವರ ಲೇಖನದಿಂದ ತಿಳಿದು ಆಶ್ಚರ್ಯವಾಯಿತು.

–ಅಪೇಕ್ಷಾ ಹೋಳಿಮಠ, ದಾವಣಗೆರೆ

### ಡಬ್ಬಗಳ್ಳಿ ಸರಿ

'ನಿಮ್ಮ ಪುಟ'ದಲ್ಲಿ ಕೊಟ್ಟೂರು ಬಿ. ನಾಗರಾಜರ ಡಬ್ಬಳದಲ್ಲಿ ಪುಷ್ಪೋತ್ಸವ ಓದಿದೆ. ಇದೊಂದು ಆರ್ಕಿಡ್ ಜಾತಿಗೆ ಸೇರಿದ್ದು, ನಮ್ಮ ಬಳ್ಳಾರಿ ಜಿಲ್ಲೆಯ ಬಹುಭಾಗದಲ್ಲಿ ಇದಕ್ಕೆ 'ಡಬ್ಬಗಳ್ಳಿ' ('ಡಬ್ಬಳ' ಅಲ್ಲ) ಎನ್ನುತ್ತಾರೆ. ಮಕ್ಕಳು ಎಚ್ಚರಿಕೆಯಿಂದ ಮುಳ್ಳು ತೆಗೆದು ಇದರೊಳಗಿನ ಸಿಹಿ ಹಣ್ಣು ತಿನ್ನುತ್ತಾರೆ.

70–80 ವರ್ಷಗಳ ಹಿಂದೆ ಡಬ್ಬಗಳ್ಳಿ ಹುಲುಸಾಗಿ ಬೆಳೆದರೆ 'ಪ್ಲೇಗ್' ಹೆಚ್ಚಾಗುತ್ತದೆ ಎನ್ನುತ್ತಿದ್ದರು. ಇಂದು ಈ ಸಂತತಿ ವಿನಾಶದ ಹಾದಿಯಲ್ಲಿದೆ.

–ಕೊಹಿಮ, ಬಸರಕೋಡು

### ತೊಂಡೆ ಮತ್ತು ಬೆಂಡೆ!

ಡಾ. ವಸುಂಧರಾ ಭೂಪತಿ ಅವರು ಬರೆದಿರುವಂತೆ 'ಬೆಂಡೆ ಔಷಧಿಯ ಆಗರ' ಅಷ್ಟೇಯಲ್ಲ. ಬೆಂಡೆಯಲ್ಲಿ ಸೌಂದರ್ಯದ ಪ್ರಸಕ್ತಿಯೂ ಉಂಟು. ಇಂಗ್ಲಿಷಿನಲ್ಲಿ ಅದಕ್ಕೆ 'ಲೇಡಿಸ್ ಫಿಂಗರ್' (ಕಾಮಿನಿಯ ಕೈ ಬೆರಳು) ಎಂದು ಹೆಸರು! (ಭಾರತೀಯ ಪರಂಪರೆಯಲ್ಲಿ ಹೆಣ್ಣಿನ ತುಟಿ ತೊಂಡೆಯಾದರೆ, ಇಂಗ್ಲಿಷಿನಲ್ಲಿ ಬೆರಳು ಬೆಂಡೆ!)

–ಸಿಪಿಕೆ, ಮೈಸೂರು

### ಬೆಂಡೆ ಔಷಧಿ ಎಂದು ಗೊತ್ತಿರಲಿಲ್ಲ!

'ಔಷಧಿಯ ಆಗರ ಬೆಂಡೆ' ಓದುವ ಮುನ್ನ ಬೆಂಡೆಯಿಂದ ಔಷಧಿ ಉಪಯೋಗ ಇದೆ ಎಂದು ಗೊತ್ತೇ ಇರಲಿಲ್ಲ!

–ಎಂ.ಎಲ್. ಲಕ್ಷ್ಮಣ್ ರಾವ್, ದಾವಣಗೆರೆ/
ಗೀತಾಂಜಲಿ ಗೌಡ, ಕೊಟ್ಟೂರು/
ಅರುಣ ಬಿ. ಕುಲಕರ್ಣಿ, ನರೇಗಲ್ಲ

### ಆರೋಗ್ಯಕ್ಕೆ ಉಪಯುಕ್ತ

ಬಹು ಉಪಯೋಗಿ ಲವಂಗ, ಅಂದದ ನಂದಿ ಬಟ್ಟಲು, ಔಷಧಿಯ ಆಗರ ಬೆಂಡೆ... ಚಿತ್ರ ಲೇಖನಗಳು ಆರೋಗ್ಯ ದೃಷ್ಟಿಯಿಂದ ಉಪಯುಕ್ತ. ಔಷಧೀಯ ಗುಣಗಳಿರುವ ಇವುಗಳ ಮಾಹಿತಿ ಸಂಗ್ರಹ ಯೋಗ್ಯ.

–ಎಚ್.ಎಸ್. ವಿಶ್ವನಾಥ್, ಶಿವಮೊಗ್ಗ

### ಅಲ್ಲಮ ನೆನಪಿಗೆ ಬರಲಿಲ್ಲವೆ?

'ವಿಚಾರ ಲಹರಿ'ಯಲ್ಲಿ ಶಿಕಾಕು ಅವರು 'ಪತನ' ಬಗ್ಗೆ ಬರೆದಿದ್ದಾರೆ.

'ಚಿತ್ತ ಜಾರುವಿಕೆ'ಯು ಕವಿ ಅಭಿನವ ಪಂಪನ ದೃಷ್ಟಿಯಲ್ಲಿ 'ವಿಧಿ ಲಿಖಿತ' ವೆಂದಾದರೆ 'ಇಂದ್ರಿಯ ನಿಗ್ರಹ'ವಿಲ್ಲದೆ ಚಪಲ ಚಿತ್ತರಾಗಿ 'ಪರ ಸ್ತ್ರೀಸಂಗ' ಮಾಡುವವರೆಲ್ಲಾ ಈ ಅಕಾರ್ಯಕ್ಕೆ ವಿಧಿ ಲಿಖಿತವೆಂದು ಹೇಳಿಕೊಳ್ಳುವುದರಲ್ಲಿ ತಪ್ಪೇನಿಲ್ಲವಲ್ಲ! 'ಹೆಣ್ಣೇ' ಪುರುಷನ ಪತನಕ್ಕೆ ಮೂಲ ಕಾರಣವೆನ್ನುವ ನಾಗಚಂದ್ರನಿಗಿಂತ, 'ಹೆಣ್ಣು ಮಾಯೆಯಲ್ಲ, ಹೊನ್ನು ಮಾಯೆಯಲ್ಲ, ಮಣ್ಣು ಮಾಯೆಯಲ್ಲ– ಮನದ ಮುಂದಣ ಆಸೆಯೇ ಮಾಯೆ ಕಾಣಾ ಗುಹೇಶ್ವರ' ಎನ್ನುವ ಅಲ್ಲಮಪ್ರಭು ಮಾತೇ ಜನರ ಮನ ಗೆಲ್ಲುತ್ತದೆ.

–ಎಚ್.ಎಂ. ಕಾಳಮ್ಮ, ಬಸರಕೋಡು

### ಚಿಂತನೆಗೆ ಗ್ರಾಸವಾದ ಕಥೆ

'ಒಡಲಾಳದ ಒಡಬಾಗ್ನಿ' ತ್ರೇತಾಯುಗದಲ್ಲಿಯೇ ಅರಮನೆಯ ಸೊಸೆ (ಶ್ರುತ ಕೀರ್ತಿ) ಹೃದಯ ಕಲಕುವ ಸನ್ನಿವೇಶಗಳನ್ನು ಎದುರಿಸಿದಳು ಎಂಬುದನ್ನು ಓದಿದಾಗ ಕರುಳು ಚುರುಕ್ ಎನ್ನದೇ ಇರದು. ಚಿಂತನೆಗೆ ಗ್ರಾಸ ಒದಗಿಸಿದ ಕಥೆ ಇದಾಗಿದೆ.

–ಪಟ್ಟಾಭಿ, ನೆ.ಲ.ರಾಂ, ಬೆಂಗಳೂರು/
–ವಿ.ರಮೇಶ, ದಾವಣಗೆರೆ

### ಖುಷಿ ತಂದ ದೋನಿ ಬರಹ

ಈ ವಾರದ ಸಂಚಿಕೆಯ ಸೆಲೆಬ್ರಿಟಿಯಲ್ಲಿ ಹನಿಯವರು ಕ್ರಿಕೆಟ್ ಆಟಗಾರ ದೋನಿಯ ಬಗೆಗೆ ಬರೆದಿರುವುದು ಓದಿ ಖುಷಿಯಾಯಿತು.

–ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

### ವಿಜ್ಞಾನದ ಸಾಧನೆ

ಡಾ. ಎಚ್.ಎಸ್. ಮೋಹನರ 'ಕೃತಕ ಜೀವಿಯ ಸೃಷ್ಟಿ' ಲೇಖನ ವಿಜ್ಞಾನದ ಸಾಧನೆಯನ್ನು ಬಿಂಬಿಸುವಂತಿತ್ತು.

–ಎಂ. ಸರ್ದಾರ್, ಅರಸೀಕೆರೆ

### ಅರೆನಗ್ನ ಜಾಹಿರಾತು ಬೇಡ!

ಅಬಾಲವೃದ್ಧರಾದಿಯಾಗಿ ಎಲ್ಲರೂ ಓದುವ ಪತ್ರಿಕೆ 'ಸುಧಾ'. ನಾನು ಚಿಕ್ಕಂದಿನಿಂದ ಈ ಪತ್ರಿಕೆ ಓದುತ್ತಿದ್ದೇನೆ. ಕೌಟುಂಬಿಕ ಹಾಗೂ ಘನತೆಯಿಂದ ಕೂಡಿದ 'ಸುಧಾ' ನಮ್ಮ ಬದುಕಿನ ಅವಿಭಾಜ್ಯ ಅಂಗವಾಗಿದೆ.

ಆದರೆ ಇತ್ತೀಚಿನ ಕೆಲವು ವಾರಗಳಿಂದ ಅರೆನಗ್ನ ಜಾಹಿರಾತುಗಳು 'ಸುಧಾ' ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದು, ನಮಗೆಲ್ಲ ಮುಜುಗರ ಉಂಟು ಮಾಡಿದೆ. ಭರದ ಜಾಗತೀಕರಣದಲ್ಲಿ ಇದೆಲ್ಲ ಎಷ್ಟೆ ಅನಿವಾರ್ಯ ಎನಿಸಿದರೂ, ಸ್ಥಳೀಯ ಮೌಲ್ಯ ಕೈಬಿಡುವುದು ಒಳಿತಲ್ಲ. ಇಂತಹ ಜಾಹಿರಾತುಗಳನ್ನು ಪ್ರಕಟಿಸಲು ಕೆಲವು ಪತ್ರಿಕೆಗಳು ತುದಿಗಾಲಲ್ಲಿ ನಿಂತಿವೆ. ಆದರೆ 'ಸುಧಾ'ಗೆ ತಕ್ಕುದಲ್ಲ.

–ಲೋಕೇಶ್ ರಮಣನ್, ಬೆಂಗಳೂರು



